# ಜಿಯೊಫೈಬರ್ ಸಂಚಲನ ಸಂಕ್ರಮಣ




■ ಶಶಿಕುಮಾರ್ ಸಿ.

ಜಿಯೊಫೈಬರ್ ಯೋಜನೆಯ ಮೂಲ ಉದ್ದೇಶ ಅತಿ ಕಡಿಮೆ ದರದಲ್ಲಿ ವೇಗದ ಇಂಟರ್‌ನೆಟ್ ಸೌಲಭ್ಯವನ್ನು ದೇಶದಾದ್ಯಂತ ಕಲ್ಪಿಸುವುದು. ವೇಗದ ಇಂಟರ್‌ನೆಟ್ ಸೇವೆಯ ಜೊತೆಗೆ ಅದಕ್ಕೆ ಪೂರಕವಾದ ಹಲವು ಸೇವೆಗಳನ್ನು ನೀಡಲಾಗುತ್ತಿದೆ. ಕಂಪನಿ ಹೇಳುವ ಪ್ರಕಾರ ಸದ್ಯ ಭಾರತದಲ್ಲಿ ಚಾಲ್ತಿಯಲ್ಲಿರುವ ಫಿಕ್ಸೆಡ್ ಲೈನ್ ಬ್ರಾಡ್‌ಬ್ಯಾಂಡ್‌ನ ಸರಾಸರಿ ವೇಗ 25 ಎಂಬಿಪಿಎಸ್. ಅಮೆರಿಕದಲ್ಲೂ ಈ ಬ್ರಾಡ್‌ಬ್ಯಾಂಡ್‌ನ ಸರಾಸರಿ ವೇಗವು 90 ಎಂಬಿಪಿಎಸ್ ಆಸುಪಾಸಿನಲ್ಲಿದೆ. ಭಾರತದ ಮೊದಲ ಆಲ್‌ಫೈಬರ್ ಬ್ರಾಡ್‌ಬ್ಯಾಂಡ್ ಸೇವೆಯಾದ ಜಿಯೊ ಫೈಬರ್‌ನ ವೇಗವು 100 ಎಂಬಿಪಿಎಸ್‌ನಿಂದ ಪ್ರಾರಂಭವಾಗಲಿದ್ದು, 1ಜಿಬಿಪಿಎಸ್‌ವರೆಗೂ ಇರಲಿದೆ. ಈ ಯೋಜನೆಯಿಂದಾಗಿ ಭಾರತವನ್ನು ಜಾಗತಿಕವಾಗಿ ಮೊದಲ ಐದು ವೇಗದ ಬ್ರಾಡ್‌ಬ್ಯಾಂಡ್ ರಾಷ್ಟ್ರಗಳ ಸಾಲಿಗೆ ಕೊಂಡೊಯ್ಯಲಿದೆ.

### ಆರಂಭಿಕ ಕೊಡುಗೆ

ಹೊಸದಾಗಿ ಜಿಯೊ ಫೈಬರ್ ವಾರ್ಷಿಕ ಸೇವೆ ಪಡೆಯುವ ಗ್ರಾಹಕರಿಗೆ ಕಂಪನಿಯು 'ಜಿಯೊ ಫೈಬರ್ ಸ್ವಾಗತಾರ್ಹ ಕೊಡುಗೆ' ಘೋಷಿಸಿದೆ. ₹5,000 ಬೆಲೆಯ ಜಿಯೊ ಹೋಮ್ ಗೇಟ್‌ವೇ ಡಿವೈಸ್, ₹6400 ಬೆಲೆಯ ಜಿಯೊ 4ಕೆ ಸೆಟ್ ಟಾಪ್ ಬಾಕ್ಸ್, ಎರಡು ತಿಂಗಳ ಹೆಚ್ಚುವರಿ ಸೇವೆ, ದುಪ್ಪಟ್ಟು ಡಾಟವನ್ನು ಕಂಪನಿಯು ಉಚಿತವಾಗಿ ನೀಡಲಿದೆ.

ಒಟಿಟಿ ಆ್ಯಪ್‌ಗಳ ಸದಸ್ಯತ್ವ ಅನಿಯಮಿತವಾದ ಕರೆ ಹಾಗೂ ಡಾಟಾ ಬಳಕೆ ಸೌಲಭ್ಯವೂ ದೊರೆಯಲಿದೆ. 'ಚಿನ್ನದ ಯೋಜನೆ' ಹಾಗೂ ಅದಕ್ಕೂ ಮೇಲ್ಪಟ್ಟ ಯೋಜನೆ ಆಯ್ಕೆ ಮಾಡಿಕೊಂಡವರಿಗೆ ಯೋಜನೆಗನುಗುಣವಾಗಿ ಟೀವಿ ಸೆಟ್ ನೀಡಲಾಗುತ್ತದೆ. ಇಷ್ಟೆಲ್ಲ ಸೇವೆಗಳು ವಾರ್ಷಿಕ ಚಂದಾದಾರರು ಆದವರಿಗೆ ಮಾತ್ರ ಲಭ್ಯ. ಮಾಸಿಕ ಚಂದಾದಾರರಿಗೆ ಇಲ್ಲ. ದೀರ್ಘಾವಧಿ ಯೋಜನೆಗಳನ್ನು ಆಯ್ಕೆ ಮಾಡಲು ಇಚ್ಛಿಸುವವರಿಗೆ ಕಂಪನಿಯೇ ಬ್ಯಾಂಕುಗಳಿಂದ ಆಕರ್ಷಕ ಇಎಂಐ ಸೌಲಭ್ಯವನ್ನು ಕಲ್ಪಿಸುತ್ತದೆ.

ಪ್ಲಾಟ್‌ಫಾರ್ಮ್ ಸೇವಾ ಸಂಸ್ಥೆಯಾದ ಆರ್‌ಸಿಐಟಿಪಿಎಲ್ ವತಿಯಿಂದ ನೀಡಲಾಗುವ 'ಗೇಮಿಂಗ್, ಸಾಧನ ಸುರಕ್ಷತೆ, ಹೋಮ್ ನೆಟ್‌ವರ್ಕಿಂಗ್, ವಿಆರ್ ಅನುಭವ, ವಿಡಿಯೊ ಕಂಟೆಂಟ್ ಸೇವೆಗಳು, ಟೀವಿ ವಿಡಿಯೊ ಕರೆಗಳು ಹಾಗೂ ಕಾನ್ಫರೆನ್ಸ್ ಕರೆಗಳ ಸೇವೆಯನ್ನಷ್ಟೇ ಸಂಸ್ಥೆಯು ಉಚಿತವಾಗಿ ನೀಡುತ್ತದೆ. ಆದರೆ, ಈ ಎಲ್ಲ ಸೇವೆಗಳಿಗೆ ಬೇಕಾದ ಅಗತ್ಯ ಸಾಧನಗಳನ್ನು ಗ್ರಾಹಕರು ಪ್ರತ್ಯೇಕವಾಗಿ ಖರೀದಿಸಬೇಕಾಗುತ್ತದೆ.

'ಕಂಚು ಯೋಜನೆ' ಪಡೆದವರಿಗೆ ಮೂರು ತಿಂಗಳವರೆಗೆ ಜಿಯೊ ಸಿನಿಮಾ ಮತ್ತು ಜಿಯೊ ಸಾವನ್ ಆ್ಯಪ್‌ಗಳ ಉಚಿತ ಸದಸ್ಯತ್ವ ಸಿಗಲಿದೆ. 'ಬೆಳ್ಳಿ ಯೋಜನೆ' ಪಡೆದುಕೊಂಡವರಿಗೆ ಮೂರು ತಿಂಗಳವರೆಗೆ ಮತ್ತು ಚಿನ್ನ, ಡೈಮಂಡ್, ಪ್ಲಾಟಿನಮ್ ಮತ್ತು ಟೈಟಾನಿಯಮ್ ಯೋಜನೆ ಪಡೆದವರಿಗೆ ವರ್ಷದವರೆಗೆ ಒಟಿಟಿ ಆ್ಯಪ್ ಸದಸ್ಯತ್ವ ಸಿಗಲಿದೆ.

**ಜಿಯೊ ಫೈಬರ್‌ನ ಚಂದಾದಾರಿಕೆಯ ವಿವರ**

| ಯೋಜನೆಗಳು | ಕಂಚು | ಬೆಳ್ಳಿ | ಚಿನ್ನ | ಡೈಮಂಡ್ | ಪ್ಲಾಟಿನಮ್ | ಟೈಟಾನಿಯಮ್ |
|---|---|---|---|---|---|---|
| ಮಾಸಿಕ ಬೆಲೆ (₹ಗಳಲ್ಲಿ) | 699 | 849 | 1,299 | 2,499 | 3,999 | 8,499 |
| ವೇಗ (ಎಂಬಿಪಿಎಸ್‌ಗಳಲ್ಲಿ) | 100 | 100 | 250 | 500 | 1 ಜಿಬಿಪಿಎಸ್ | 1 ಜಿಬಿಪಿಎಸ್ |
| ಫೇರ್ ಯೂಸ್ ಪಾಲಿಸಿ (ಜಿಬಿಗಳಲ್ಲಿ) | 100+50 | 200+20 | 50+250 | 1250+250 | 2500 | 5000 |

### ನೋಂದಣಿ ಹೇಗೆ?

ಜಿಯೊ ಗಿಗಾಫೈಬರ್ (gigafiber.jio.com/registration) ವೆಬ್‌ಸೈಟ್‌ಗೆ ಭೇಟಿ ನೀಡಬೇಕು. ನಂತರ ಜಿಯೊ ಫೈಬರ್ ಸೇವೆ ಕಲ್ಪಿಸಬೇಕಾದ ಸ್ಥಳವನ್ನು (ಮನೆ ಅಥವಾ ಕಚೇರಿ) ವೆಬ್‌ಸೈಟ್‌ನಲ್ಲಿ ಕಾಣುವ ಗೂಗಲ್ ಮ್ಯಾಪ್‌ನಲ್ಲಿ ಗುರುತಿಸಿ ಸಬ್ಮಿಟ್ (Submit) ಆಯ್ಕೆಯನ್ನು ಕ್ಲಿಕ್ಕಿಸಬೇಕು. ನಂತರ ಪರದೆ ಮೇಲೆ ಕಾಣುವ ನಿಗದಿತ ಜಾಗದಲ್ಲಿ ನಿಮ್ಮ ಹೆಸರು, ಮೊಬೈಲ್ ಸಂಖ್ಯೆ, ಇಮೇಲ್ ಐಡಿ ಹಾಗೂ ಜಿಯೊ ಫೈಬರ್‌ನ ಉಪ ಯೋಜನೆಗಳನ್ನು (ಕಂಚು, ಬೆಳ್ಳಿ, ಚಿನ್ನ, ಡೈಮಂಡ್, ಪ್ಲಾಟಿನಮ್ ಹಾಗೂ ಟೈಟಾನಿಯಮ್) ಆಯ್ದುಕೊಳ್ಳಬೇಕು. ಬಳಿಕ ಮೊಬೈಲ್ ಸಂಖ್ಯೆಗೆ ರವಾನೆಯಾಗುವ ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ನಮೂದಿಸಬೇಕು. ಆ ಮೂಲಕ ನೋಂದಣಿ ಪರಿಶೀಲನೆಗೆ ಒಳಪಡುತ್ತದೆ.

ನಿಮ್ಮ ಆಯ್ಕೆ ಮಾಡಿದ ಪ್ರದೇಶದಲ್ಲಿ ಜಿಯೊಫೈಬರ್ ಸಂಪರ್ಕ ಚಾಲ್ತಿಯಲ್ಲಿದ್ದರೆ ಸಂಸ್ಥೆ ನಿಮ್ಮ ಮನವಿ ಮೇರೆಗೆ ರೂಟರ್ ಅಳವಡಿಸುತ್ತದೆ. ರೂಟರ್ ಅಳವಡಿಸಿದ ಎರಡು ಗಂಟೆಗಳ ಬಳಿಕ ಇಂಟರ್‌ನೆಟ್ ಸಂಪರ್ಕ ಪೂರ್ಣಗೊಳ್ಳುತ್ತದೆ. ನೀವಿರುವ ಪ್ರದೇಶ ಜಿಯೊ ಫೈಬರ್‌ಲೈನ್ ವ್ಯಾಪ್ತಿಗೆ ಒಳಪಟ್ಟಿದ್ದರೆ ಮಾತ್ರ ಸಂಸ್ಥೆಯಿಂದ ನಿಮಗೆ ಕರೆ ಬರುತ್ತದೆ. ಇಂಟರ್‌ನೆಟ್ ಸಂಪರ್ಕ ಪಡೆಯಲು ರೂಟರ್ ಅತ್ಯಗತ್ಯ.

'ನೋಂದಣಿ ಪ್ರಕ್ರಿಯೆಯು ಕ್ಲಿಷ್ಟಕರವಾಗಿದೆ ಗ್ರಾಹಕರಿಂದ ಪ್ರತಿಕ್ರಿಯೆ ಬಂದಿದೆ. ಅದನ್ನು ಇನ್ನೂ ಸರಳೀಕರಣಗೊಳಿಸಲಾಗುತ್ತಿದೆ. ರಾಜ್ಯದ ಪ್ರಮುಖ ನಗರಗಳಲ್ಲಿ ಈಗಾಗಲೇ ಜಿಯೊ ಫೈಬರ್ ಸೇವೆ ಲಭ್ಯವಿದ್ದು, ಎರಡನೇ ಹಂತದ ನಗರಗಳು ಹಾಗೂ ಗ್ರಾಮೀಣ ಭಾಗಗಳಲ್ಲಿ ಜಿಯೊಫೈಬರ್ ಅಳವಡಿಕೆ ಕಾರ್ಯ ಸಾಗುತ್ತಿದೆ. ಅದು ಪೂರ್ಣಗೊಂಡ ಬಳಿಕ ಎರಡನೇ ಹಂತದ ನಗರಗಳು, ಪಟ್ಟಣಗಳು ಹಾಗೂ ಗ್ರಾಮೀಣ ಭಾಗಗಳಲ್ಲೂ ಜಿಯೊಫೈಬರ್ ಸೇವೆ ಪಡೆಯಬಹುದಾಗಿದೆ' ಎಂದು ಜಿಯೊ ಕಮ್ಯುನಿಕೇಷನ್‌ನ ರಾಜ್ಯ ವಿಭಾಗದ ಮುಖ್ಯಸ್ಥೆ ರೇಖಾ ಅವರು 'ಸುಧಾ'ಗೆ ತಿಳಿಸಿದರು. ■